ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಪ್ರೊಫೆಸರ್ ಆರ್. ಸಿ. ಮೆಹ್ರೋತ್ರ ಅವರ ಶಿಫಾರಸುಗಳ ಆಧಾರದ ಮೇಲೆ ಭಾರತ ಸರ್ಕಾರವು ೧೯೮೬ ಜನವರಿ ಒಂದರಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾನಿಲಯದ ಶಿಕ್ಷಕರ ವೇತನ ಶ್ರೇಣಿಗಳನ್ನು ಪರಿಷ್ಕೃತಗೊಳಿಸಿದೆ. ಈ ಪರಿಷ್ಕೃತ ವೇತನ ಶ್ರೇಣಿಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ೫ ವಿಶ್ವವಿದ್ಯಾನಿಲಯಗಳ ಶಿಕ್ಷಕರಿಗೆ ದಿನಾಂಕ ೧-೧-೧೯೮೬ ರಿಂದ ಜಾರಿಗೆ ಬರುವಂತೆ ಆದೇಶ ಸಂಖ್ಯೆ ಇಡಿ ೬೦ ಯುಎನ್‌ಐ ೮೭ ದಿನಾಂಕ ೫-೧೨-೧೯೮೭ರಂದು ಹೊರಡಿಸಿದೆ. ಇದು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೂ ಅನ್ವಯಿಸಿ ಸದರಿ ಆದೇಶದ ಮೇರೆಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸಂಬಳ ಕೊಡಲಾಗುವುದು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಒದಗಿಸಲಿರುವ ಶೇಕಡ ೮೦ರಷ್ಟು ಹೆಚ್ಚುವರಿ ವೆಚ್ಚದಲ್ಲಿ ೧೯೮೬ ಮತ್ತು ೧೯೮೭ ವರ್ಷಗಳಿಗೆ ಬಿಡುಗಡೆ ಮಾಡಬೇಕೆಂದು ಯುಜಿಸಿ ಕಾರ್ಯದರ್ಶಿಯವರಿಗೆ ರಾಜ್ಯ ಸರ್ಕಾರದಿಂದ ಪತ್ರ ಬರೆಯಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ ಬಹಳ ದಿವಸಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಸುಮಾರು ೮೦ ಜನ ಪ್ರೊಫೆಸರ್‌ಗಳು ೭೦೦ ಜನ ರೀಡರ್ಸ್‌ಗಳು ಹಾಗೂ ೧೨೦೦ ಜನ ಲೆಕ್ಚರರ್ಸ್‌ಗಳ ಬೇಡಿಕೆ ಇನಿತ್ತು ಅದನ್ನು ಶಿಕ್ಷಣ ಸಚಿವರು ಈಗ ಈಡೇರಿಸಿಕೊಟ್ಟಿದ್ದಾರೆ, ಆದಕ್ಕಾಗಿ ನಾನು ಅಧ್ಯಾಪಕರ ಪರವಾಗಿ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ,

ಅಧ್ಯಕ್ಷರು.—ಮಾನ್ಯ ಶರಣಬಸಪ್ಪ ಮಾಲೀ ಪಾಟೀಲ್, ಸದಸ್ಯರು ಗೈರುಹಾಜರಾಗಿದ್ದಾರೆ,

೨) ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

ಶ್ರೀ ಎಂ ಎಸ್. ಕೃಷ್ಣನ್.—ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಮೇಲೆ ನಡೆಸಿರುವ ದೌರ್ಜನ್ಯದ ಬಗ್ಗೆ ಮಾನ್ಯ ಗೃಹಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ತುರವನೂರು ಚಿತ್ರದುರ್ಗಕ್ಕೆ ಸುಮಾರು ೨೩ ಕಿ.ಮೀ ದೂರವಿದೆ. ಎಲ್ಲಾ ಜನಾಂಗಕ್ಕೆ ಸೇರಿದ ಸುಮಾರು ೧೫,೦೦೦ ಜನ ಸಂಖ್ಯೆ ಇದೆ. ಸದರಿ ಊರಿನಲ್ಲಿ ಒಂದು ಮಾರಮ್ಮನ ದೇವಸ್ಥಾನ ಇದ್ದು ಕಳೆದ ೭೦ ವರ್ಷಗಳಿಂದ ಜಾತ್ರೆ ಆಗಿರಲಿಲ್ಲ. ಈ ವರ್ಷ ಊರಿನ ಎಲ್ಲಾ ಜನಾಂಗದವರು ಸದರಿ ಜಾತ್ರೆಯನ್ನು ಇದೇ ಜನವರಿ ೧೯ ರಿಂದ ೨೨ರವರೆಗೆ ನಡೆಸಲು ತೀರ್ಮಾನಿಸಿರುತ್ತಾರೆ. ಈ ಸಂದರ್ಭದಲ್ಲಿ ಅಲ್ಲಿನ ಪರಿಶಿಷ್ಟ ವರ್ಗದವರು ರಕ್ತಮಿಶ್ರಿತ ಅನ್ನವನ್ನು ಊರಿನ ಸರಹದ್ದುಗಳ ಮೇಲೆ ಚೆಲ್ಲುವುದು ಒಂದು ಸಂಪ್ರದಾಯವಾಗಿದೆ, ಆದರೆ ಅವರು ಈ ರಕ್ತಮಿಶ್ರಿತ ಅನ್ನವನ್ನು ಹಳೆಯ ಸರಹದ್ದುಗಳ ಮೇಲೆ ಚೆಲ್ಲಿ ಹೊಸ ಬಡಾವಣೆಗನನ್ನು ಬಿಟ್ಟಿರುತ್ತಾರೆ, ಇದರಿಂದ ಉಳಿದ ಕೋಮುಗಳ ಜನಗಳು ಕಂಪಿತರಾಗಿದ್ದು ಸ್ಥಳೀಯ ಪೊಲೀಸರ ಮಧ್ಯಸ್ತಿಕೆಯಿಂದ ಪರಿಸ್ಥಿತಿ ಹತೋಟಿಯಲ್ಲಿ ಇತ್ತು.

ಪರಿಶಿಷ್ಟ ವರ್ಗದವರು ಮಾಡಿದ ಸಂಪ್ರದಾಯದ ಕೆಲಸಕ್ಕಾಗಿ ಊರಿನವರು ಸುಮಾರು ೬೦ ಕಂರಿಗಳನ್ನು ಮತ್ತು ಹಣವನ್ನು ಕೊಡುವುದಿತ್ತು. ಸವರ್ಣೀಯರವರು ಪರಿಶಿಷ್ಟ ಜಾತಿಯವರ ಮನವಿಯನ್ನು ನಿರಾಕರಿಸಿರುತ್ತಾರೆ. ಇದರಿಂದಾಗಿ ಇವರಿಬ್ಬರ ನಡವೆ ವೈಮನಸ್ಯ ಉಂಟಾಗಿದೆ.

ದಿನಾಂಕ ೨೨-೧-೧೯೮೮ರಂದು ತುರುವನೂರು ಬಸ್‌ಸ್ಟಾಂಡಿನ ಬಳಿ ಪರಿಶಿಷ್ಟ ಜಾತಿಗೆ ಸೇರಿದ ತಿಪ್ಪಯ್ಯನನ್ನು ಅದೇ ಊರಿನ ರೆಡ್ಡಿ ಜನಾಂಗದ ಗೋವಿಂದಪ್ಪನು, ರಕ್ತಮಿಶ್ರಿತ ಅನ್ನವನ್ನು ಹೊಸ ಬಡಾವಣೆಯಲ್ಲಿ ಚೆಲ್ಲಿದಿದ್ದ ಕಾರಣ ಹೊಡೆದಿರಂತ್ತಾರೆ. ಗಾಯಗೊಂಡ ತಿಪ್ಪಯ್ಯನನ್ನು, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಸೇರಿಸಿ, ಅವರ ಹೇಳಿಕೆ ಮೇರೆಗೆ ಗೋವಿಂದಪ್ಪನ ಮೇಲೆ ಒಂದು ಮೊಕದ್ದಮೆ ದಾಖಲಿಸಿ ಮಾಡಿಕೊಳ್ಳಲಾಯಿತು. ವಿಷಯ ತಿಳಿದ ಸುಮಾರು ೨೫-೩೦ ಪರಿಶಿಷ್ಟ ವರ್ಗದ ಗುಂಪು ಸಂಜೆ ೬-೩೦ ಗಂಟೆಗೆ ಊರಿನೊಳಗೆ ಬಂದು ಗೋವಿಂದಪ್ಪನು, ತಿಪ್ಪಯ್ಯನಿಗೆ ಹೊಡೆದ ಬಗ್ಗೆ ಪ್ರಶ್ನಿಸಿರುತ್ತಾರೆ.

ಇದರಿಂದಾಗಿ ಕೋಪಗೊಂಡ ಸವರ್ಣೀಯರು ಸುಮಾರು ೫೦೦ ಜನರು ಮಂಡಲ್ ಪ್ರಧಾನ ರಾಮಕೃಷ್ಣರೆಡ್ಡಿ, ಗ್ರಾಪಂ ದಳಪತಿ ಐಯ್ಯನಗೌಡ ಮಂತ್ತು ಇತರರ ಮುಂಖಂಡತ್ವದಲ್ಲಿ ಪರಿಶಿಷ್ಟ ಜಾತಿಯ ಕೇರಿ ಮೇಲೆ ದಾಳಿ ಮಾಡಿ ಅವರನ್ನು ಹೊಡೆದು ಅವರ ಮನೆಗಳಿಗೆ ಹುಲ್ಲಿನ ಮೆದೆಗಳಿಗೆ ಮತ್ತು ಎತ್ತಿನ ಗಾಡಿಗಳಿಗೆ ಬೆಂಕಿ ಹಚ್ಚಿ ನಾಶಮಾಡಿರುತ್ತಾರೆ.

ಸದರಿ ತುರುವನೂರ್ ಸಬ್‌ಇನ್ಸ್‌ಪೆಕ್ಟರ್ ತನ್ನಲ್ಲಿದ್ದ ಅಲ್ಪ ಮಂದಿ ಪೊಲೀಸರ ಜೊತೆ ಸ್ಥಳಕ್ಕೆ ಧಾವಿಸಿ ಸವರ್ಣೀಯರು ಎಸಗಿದ ದಬ್ಬಾಳಿಕೆಯನ್ನು ತಡೆಯಲು ಪ್ರಯತ್ನಪಟ್ಟು ವಿಫಲರಾಗಿ ಉದ್ರಿಕ್ತ ಗೊಂಡ ಸವರ್ಣೀಯರನ್ನು ಚದುರಿಸಲು ಗಾಳಿಯಲ್ಲಿ ೪ ಸುತ್ತು ಗೋಲಿ ಹಾರಿಸಿದರು. ತತ್ಪರಿಣಾಮವಾಗಿ ದುಷ್ಕರ್ಮಿಗಳು ಚದುರಿ ಹೋದರು. ಇಷ್ಟರೊಳಗೆ ಚಿತ್ರದುರ್ಗ ಸರ್ಕಲ್ ಇನ್ಸ್‌ಪೆಕ್ಟರ್ ಪೊಲೀಸ್ ದಳದೊಂದಿಗೆ ಸ್ಥಳಕ್ಕೆ ಧಾವಿಸಿ ಎಲ್ಲರೂ ಸೇರಿ ಸಂಜೆ ೭½ಗೆ ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ, ಅಗ್ನಿಶಾಮಕ ಸಲಕರಣೆಯನ್ನು ಚಿತ್ರದುರ್ಗದಿಂದ ತರಿಸಿ ಬೆಂಕಿಯನ್ನು ಆರಿಸಿರುತ್ತಾರೆ. ಪೊಲೀಸ್ ಸೂಪರಿಂಟೆಂಡೆಂಟ್‌ರವರು ಸಹ ಅದೇ ರಾತ್ರಿ ಸ್ಥಳಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ಮಾಡಿರುತ್ತಾರೆ.

ಬೆಂಕಿ ಹಚ್ಚಿದ ದುರಂತದಲ್ಲಿ ೩ ಎಂಜಿನೆಗಳು ೧೨ ಗುಡಿಸಲುಗಳು, ೧೨ ಹುಲ್ಲಿನ ಮೆದೆಗಳು, ಒಂದು ಎತ್ತಿನಗಾಡಿ, ೨ವೈಕೆಗಳು ಮತ್ತು ೮ ಕೋಳಿಗಳು ಸುಟ್ಟುಹೋಗಿ ಸುಮಾರು ೧,೬೩,೦೦೦ ರೂಪಾಯಿ ಗಳಷ್ಟು ನಷ್ಟ ಉಂಟಾಗಿದೆ ಎಂದು ತಿಳಿದು ಬಂದಿದೆ. ಸವರ್ಣೀಯರು ಮಾಡಿದ ಕಲ್ಲು ತೂರಾಟದಲ್ಲಿ ಪರಿಶಿಷ್ಟ ವರ್ಗದಪ ಮಹಿಳೆಯರಿಗೆ ಮತ್ತು ೪ ಪುರುಷರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಸಂದರ್ಭ ದಲ್ಲಿ ತುರುವನೂರು ಪೊಲೀಸ್ ಸ್ಟೇಷನ್‌ನಲ್ಲಿ ೬ ಮೊಖದ್ದಿ ಮೆಗಳು, ನೊಂದಾಯಿಸಿಕೊಳ್ಳಲಾಗಿದೆ,

ದೌರ್ಜನ್ಯ ನಡೆಸಲಾಗಿದೆ ಎನ್ನಾವವರ ಪೈಕಿ ೫೦ ಮಂದಿಯನ್ನು ಅದೇ ದಿನ ದಸ್ತಗಿರಿ ಮಾಡ ಲಾಗಿದ್ದು ನ್ಯಾಯಾಂಗ ಬಂಧನಕ್ಕೆ ಕಳುಹಿಸುವಾಗ ಸವರ್ಣೀಯರು ಪೈಕಿ ಸುಮಾರು ೫೦೦ ಮಂಜಿ ಯರನ್ನು ಒಳಗೊಂಡ ೨,೦೦೦ ಜನರ ಗುಂಪು ಸೇರಿ ಪೊಲೀಸರ ಕರ್ತವ್ಯವನ್ನು ಪ್ರತಿಭಟಿಸಿರುತ್ತಾರೆ. ದಾವಣಗೆರೆಯ ಡಿ.ಐ.ಜಿ. ಮತ್ತು ಚಿತ್ರದುರ್ಗ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್‌ರವರು, ಉದ್ರಿಕ್ತಗೊಂಡ ಸವರ್ಣೀಯರನ್ನು ಸಮಾಧಾನ ಪಡಿಸಿ ಕಳುಹಿಸಿರುತ್ತಾರೆ, ಒಟ್ಟು ಆಪರಾಧಿಗಳು ೧೩೮ ಮಂದಿ ಇದ್ದು ಇದರಲ್ಲಿ ಈಗಾಗಲೇ ೯೫ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಎಲ್ಲರೂ ಜುಡಿಷಿಯಲ್ ಕಸ್ಟಡಿಯಲ್ಲಿದ್ದಾರೆ. ನಾಯಕರೆಂ, ಕುರುಬ ಜನಾಂಗದವರೂ, ಗೊಲ್ಲ ಜನಾಂಗದವರೂ ಸಹ ಈ ಧಾಳಿಯಲ್ಲಿ ಭಾಗವಹಿಸಿರುವುದು ಕಂಡುಬಂದಿದೆ.

ಕೇಸುಗಳ ತನಿಖೆ ಮುಂದುವರೆದಿದ್ದು ಸ್ಥಳೀಯ ಭದ್ರತೆಗಾಗಿ ಪೊಲೀಸ್ ವ್ಯವಸ್ಥೆ ಮಾಡಲಾಗಿದ್ದು ಈಗ ಪರಿಸ್ಥಿತಿ ಸಂಪೂರ್ಣ ಹತೋಟಿಯಲ್ಲಿದೆ. ಈ ಘಟನೆಗಳು ಸವರ್ಣೀಯರ ಮತ್ತು ಪರಿಶಿಷ್ಟ ವರ್ಗ ದವರ ಮಧ್ಯೆ ಉಂಟಾದ ಭಿನ್ನಾಭಿಪ್ರಾಯಗಳಿಂದ ಉದ್ಭವಿಸಿದವೇ ಹೊರತು ಬೇರೆ ಯಾವ ಕಾರಣವೂ ಇರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೇ ಇಲ್ಲಿ ಎರಡು ಮೂರು ಪ್ರಶ್ನೆಗಳು ಬರುತ್ತವೆ. ಮೊದಲನೆಯದ್ದು ಏನೆಂದರೆ, ಈ ರೀತಿಯಾಗಿ ರಕ್ತ ಮಿಶ್ರಿತ ಅನ್ನವನ್ನು ಊರಿನ ಸರಹದ್ದುಗಳ ಮೇಲೆ ಚೆಲ್ಲುವುದು ಅಲ್ಲಿ ಒಂದು ಸಂಪ್ರದಾಯವಾಗಿದೆ ಎಂದು ಹೇಳಿದ್ದೀರಿ. ಈ ಜಾತ್ರೆಯಲ್ಲಿರುವಂಥ ಈ ಸಂಪ್ರದಾಯ ಅಷ್ಟು ಒಳ್ಳೆಯದಲ್ಲ. ಈ ಸಂಪ್ರದಾಯವನ್ನು ನಿಲ್ಲಿಸಿ ಬೇರೆ ಒಳ್ಳೆಯ ಸಂಪ್ರದಾಯ ವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ನಡೆದರೆ ತೊಂದರೆಯಾಗಬಹುದು ಎಂದು ತಿಳಿದು ಕೊಂಡು ಜಾತ್ರೆಯ ಮುಂಚೆಯೇ ಇದನ್ನು ತಡೆಯುವುದಕ್ಕೆ ಮತ್ತು ಬೇರೆ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುವುದಕ್ಕೆ ಅಲ್ಲಿರುವ ಅಧಿಕಾರಿಗಳಾಗಲೀ ಸರ್ಕಾರವಾಗಲೀ ಏನೂ ಕ್ರಮ ತೆಗೆದುಕೊಂಡಿರಲಿಲ್ಲವೆ ?

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲಿಯ ಪೋಲೀಸ್ ಅಧಿಕಾರಿಗಳಿಗೂ ಕೂಡ ಈ ಸಮಾಚಾರ ಗೊತ್ತಿರಲಿಲ್ಲ. ಕಳೆದ ೭೦ ವರ್ಷಗಳಿಂದ ಈ ಜಾತ್ರೆ ಆಗಿರಲಿಲ್ಲ. ಇವತ್ತಿಗೂ ನಮ್ಮ ಹಳ್ಳಿಗಳಲ್ಲಿ ಈ ಸಂಪ್ರದಾಯ ಆಚರಣೆಯಲ್ಲಿದೆ. ಆದರೆ ಅಲ್ಲಿ ರಕ್ತ ಮಿಶ್ರಿತ ಅನ್ನ ಚೆಲ್ಲುವುದಕ್ಕೆ ಹರಿಜನರದ್ದು, ಪರಿಶಿಷ್ಟ ವರ್ಗದವರದ್ದು ಆಭ್ಯಂತರ ಇಲ್ಲ. ಹಳೆಯ ಸರಹದ್ದುಗಳ ಮೇಲೆ ಮಾತ್ರ ಚೆಲ್ಲಿ ಹೊಸ ಬಡಾವಣೆ

ಯನ್ನು ಬಿಟ್ಟಿರುವುದಕ್ಕಾಗಿ ಈ ಘಟನೆ ನಡೆದಿದೆ. ಅಲ್ಲಿ ಕೂಡ ಅನ್ನವನ್ನು ಚೆಲ್ಲಿದ್ದರೆ ಈ ತೊಂದರೆಗೆ ಅವಕಾಶ ಇರುತ್ತಿರಲಿಲ್ಲ. ೨೦ನೇ ತಾರೀಖು ಬೆಳಿಗ್ಗೆ ಮೂರುವರೆ ಗಂಟೆ ವೇಳೆಗೆ ಅನ್ನವನ್ನು ಚೆಲ್ಲಿರುವುದು. ೨೦ ೨೧ ರಂದು ಯಾವ ಗಲಾಟೆಯೂ ಇಲ್ಲ. ೨೨ ರಂದು ಸಾಯಂಕಾಲ ಶ್ರೀ ತಿಪ್ಪಯ್ಯ ಎನ್ನುವವರನ್ನು ಹೊಡೆದಿದ್ದಾರೆ. ಆಗ ಇದೆಲ್ಲಾ ಗಲಾಟೆ ಪ್ರಾರಂಭವಾಯಿತೇ ವಿನಹ, ಅದು ನಡೆಯದೇ ಇದ್ದಿದ್ದರೆ ಈ ಬಗ್ಗೆ ಗಲಾಟೆಗೆ ಅವಕಾಶ ಇರುತ್ತಿರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ತಿಪ್ಪಯ್ಯ ಮತ್ತು ರೆಡ್ಡಿ, ಇವರಿಬ್ಬರ ಬಗ್ಗೆ ಭೇಟಿ ಕೊಟ್ಟು ಹೇಳಿಕೆಯನ್ನು ಕೊಟ್ಟಿದ್ದೀರಿ. ತಾವು ಹೇಳಿರುವ ಪ್ರಕಾರ ಅವರಿಬ್ಬರೂ ಸಹ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು, ಕಾಂಗ್ರೆಸ್ ಪಕ್ಷಕ್ಕೆ ಸೇರಿ ಈ ಕೆಲಸ ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. ಇದರಲ್ಲಿ ಎಷ್ಟು ನಿಜಾಂಶ ಇದೆ ? ಅಥವಾ ಇದು ಒಂದು ಕೋಮಿಗೆ ಮತ್ತು ಇನ್ನೊಂದು ಕೋಮುವಿನ ನಡುವೆ ನಡೆಯಿರುವ ಘರ್ಷಣೆಯೇ ?

ಶ್ರೀ ಆರ್. ಎಲ್. ಜಾಲಪ್ಪ.— ಅವರನ್ನು ಕೇಳಿದ್ದೇನೆ. ಶ್ರೀ ವಿಕಾಂತಯ್ಯ ಮತ್ತು ಶ್ರೀ ಕೆ. ಹೆಚ್. ರಂಗನಾಥ್ ಅವರ ಜೊತೆಯಲ್ಲಿ ಹೋಗಿದ್ದಾಗ ಕೇಳಿದ್ದು ವಿನೆಂದರೆ ಹಿಂದೆ ವಿನಾದರೂ ವೈಮನಸ್ಸು ಇತ್ತೇ ಎಂದೂ. ಪರಿಶಿಷ್ಟ ವರ್ಗದವರು ಹೇಳಿದರು ವಿವಿನೇನೂ ಇರಲಿಲ್ಲ. ನಾವು ಒಟ್ಟಿಗೆ ಸೇರಿ ಜಾತ್ರೆ ಮಾಡಬೇಕೆಂದು ತೀರ್ಮಾನ ಮಾಡಿದ್ದೆವು. ದುರಾದೃಷ್ಟವಶಾತ್ ತಿಪ್ಪಯ್ಯ ನನ್ನ ಹೊಡೆದಿದ್ದಾರೆ. ಅಲ್ಲಿಂದ ಗಲಾಟೆ ಶುರುವಾಯಿತೇ ವಿನಹ ಅಲ್ಲಿಯವರೆಗೆ ವಿನೂ ಇರಲಿಲ್ಲ' ಎಂದು ಅವರು ಹೇಳಿದ್ದಾರೆ. ನಾನು ಹೇಳಿದ್ದುದು ನಿಜ. ಅವರು ಹೇಳಿದರು ಪ್ರಧಾನರೇ ನಿಂತು ಈ ಗಲಾಟೆಯನ್ನು ಮಾಡಿಸಿದ್ದಾರೆ ಎಂದೂ. ಆ ಪ್ರಧಾನರು ಕಾಂಗ್ರೆಸ್ ಪಕ್ಷದವರು.

ಶ್ರೀ ಎಂ. ಎಸ್. ಕೃಷ್ಣನ್.—ಇವೊತ್ತು ಅನೇಕ ಜನರ ಮೇಲೆ ಕೇಸ್ ಹಾಕಿದ್ದಾರೆ. ಇದಲ್ಲದೆ ೧ ಲಕ್ಷ ೬೫ ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆ. ಇಷ್ಟು ನಷ್ಟ ಆಗಿರುವುದಕ್ಕೆ ತಾವು ವಿನಾದರೂ ಪರಿಹಾರ ಕೊಟ್ಟಿದ್ದೀರಾ ? ಎಷ್ಟು ಕೊಟ್ಟಿದ್ದೀರಿ ? ಇನ್ನೂ ವಿನಾದರೂ ಪರಿಹಾರ ಕೊಟ್ಟು ಅವರಿಗೆ, ಮುಖ್ಯವಾಗಿ ವಿನು ಗುಡಿಸಲುಗಳು, ಮನೆಗಳು ಸುಟ್ಟುಹೋಗಿರಬಹುದು. ಅವರಿಗೆ ಪುನಃ ಕಟ್ಟಿಸಿ ಕೊಳ್ಳುವುದಕ್ಕೆ ವಿನುಕೂಲ ಮಾಡಿಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅಂದು ಸಂಜೆಯೇ ಜಿಲ್ಲಾಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಸಿ.ಆರ್.ಇ. ಸೆಲ್‌ನವರು ಈಗಾಗಲೇ ಹೋಗಿದ್ದಾರೆ ಎಂದು ಕಾಣುತ್ತದೆ. ಈ ಗಲಾಟೆಯಿಂದ ವಿನು ಲುಕ್ಸಾನು ಆಗಿದೆ, ಅದಕ್ಕೆ ಅವರಿಗೆ ಕಂಪೆನ್‌ಸೇಶನ್ ಕೊಡುವುದಕ್ಕೆ ಮತ್ತು ಸೂಕ್ತ ನೆರವು ಕೊಡಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಜಿ ಬಸವಣ್ಣ (ಸಮಾಜ ಕಲ್ಯಾಣ ಮಂತ್ರಿ).—ಹರಿಜನರು ವಿನು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಅವರಿಗೆ ವಿಶೇಷವಾಗಿ ಪರಿಹಾರ ಕೊಡುವುದಕ್ಕೆ ಒಂದು ವ್ಯವಸ್ಥೆ ನಮ್ಮ ಇಲಾಖೆಯಲ್ಲಿ ಇದೆ. ಅಷ್ಟಕ್ಕೆ ಎರಡು ಸಾವಿರ ರೂಪಾಯಿಗಳ ಗ್ಯಾರಂಟಿ ಕೊಡುವುದಕ್ಕೆ ನಾನು ಆದೇಶ ಕೊಟ್ಟಿದ್ದೇನೆ. ದೌರ್ಜನ್ಯಕ್ಕೆ ಒಳಗಾದವರಿಗೆ, ನಮ್ಮಲ್ಲಿ ಸ್ಪೆಶಲ್ ಕಾಂಪೊನೆಂಟ್ ಸ್ಕೀಂನಲ್ಲಿ ಡಿಸ್ಕ್ರಿಶನರಿ ಗ್ರಾಂಟ್‌ನಲ್ಲಿ ಎಷ್ಟು ಹಣ ಉಳಿಯುತ್ತದೆ ಆದರಲ್ಲಿ ಸಂಬಾರು ಒಂದು ಲಕ್ಷದವರೆಗೆ ವಿಶೇಷ ರಿಯಾಯ್ತಿ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಪೋಲೀಸರದ್ದು ವಿನೂ ತಪ್ಪು ಇಲ್ಲ ಎನ್ನುವ ರೀತಿಯಲ್ಲಿ ಸರ್ಕಾರದ ಹೇಳಿಕೆ ಇದೆ. ಅಲ್ಲಿ ಎಲ್ಲಾ ಸರಿಯಾದಂಥ ಕ್ರಮವನ್ನು ತೆಗೆದುಕೊಂಡಿದ್ದರು ಎನ್ನವಂಥ ರೀತಿಯಲ್ಲಿ ಈ ಹೇಳಿಕೆ ಇದೆ. ತಮಗೆ ಗೊತ್ತಿದೆ, ಊರಿನ ಜಾತ್ರೆಗಳು ಎಂದರೆ ಸಾಮಾನ್ಯವಾಗಿ ಕುಡಿದು ಕುಣಿದು ಮಾಂಸದ, ರಕ್ತದ ಅನ್ನವನ್ನು ವಿಶ್ರಮಾಡಿ ಚೆಲ್ಲುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ೧೨, ೧೫ ವರ್ಷಗಳಿಗೊಮ್ಮೆ ಹೀಗೆ ಜಾತ್ರೆಗಳನ್ನು ಮಾಡುವಾಗ ಇಲ್ಲಿ ೭೦ ವರ್ಷಗಳ ನಂತರ ಜಾತ್ರೆ ಮಾಡಿದ್ದಾರೆ. ಈ ಜಾತ್ರೆಯನ್ನು ಏರ್ಪಡಿಸುವ ವಿಚಾರ ತುರುವನೂರು ವ್ಯಾಪ್ತಿಯಲ್ಲಿ ಬರತಕ್ಕಂಥ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಅವರಿಗೆ ಗೊತ್ತಿರಲಿಲ್ಲವೆ ? ಜಾತ್ರೆ ನಡೆಯುತ್ತದೆ ಎಂದು ಗೊತ್ತಿದ್ದರೂ, ಇತ್ತೀಚೆಗೆ ನಡೆಯುತಕ್ಕಂಥ ಗುಂಪು ಗಲಭೆಗಳು ಜಾಸ್ತಿಯಾಗುತ್ತಿವೆ ನಮ್ಮಲ್ಲಿ. ಹೀಗಿರುವಾಗ ಹೆಚ್ಚಿನ ಸಿಬ್ಬಂದಿಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಠಿಕಾಣಿ ಮಾಡಿ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿರಲಿಲ್ಲವೆ ?

ಶ್ರೀ ಆರ್ ಎಲ್, ಜಾಲಪ್ಪ.—ಬೇರೆ ಜನಾಂಗದವರು ಮತ್ತು ಪರಿಶಿಷ್ಟ ಜಾತಿಗೆ ಸೇರಿದವರು ಒಟ್ಟಿಗೆ ಸೇರಿ ಈ ಜಾತ್ರೆ ನಡೆಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ, ಪೋಲಿಸಿನವರು ೨೦–೨೧ನೇ ತಾರೀಖು ಇದ್ದರು. ಅನಂತರ ಪೋಲೀಸ್ ಫೋರ್ಸ್ ವಾಪಸ್ ಹೋಯಿತು. ಆಕಸ್ಮಾತ್ ಬಸ್ ಸ್ಟ್ಯಾಂಡಿನಲ್ಲಿ ಇವರು ಹೊಡೆದಾಡಿದರು. ಈ ಹೊಡೆದಾಟ ಇಲ್ಲದೇ ಹೋಗಿದ್ದರೆ, ಈ ಘಟನೆ ಆಗುತ್ತಿರಲಿಲ್ಲ. ಪೋಲಿಸಿನವರು ಕ್ರಮ ತೆಗೆದುಕೊಂಡಿದ್ದಾರೆ. ೨೨ನೇ ತಾರೀಖು ಮಧ್ಯಾಹ್ನ ವ್ಯಾನ್ ವಾಪಸ್ ಹೋಗಿದೆ. ನಂಟರು, ಬಂದವರೆಲ್ಲರೂ ವಾಪಸ್ ಹೋಗಿದ್ದಾರೆ.

ಶ್ರೀ ಎಂ.ಎಸ್ ಕೃಷ್ಣನ್.—ತಾವು ಈಗ ಸದ್ಯದ ಪರಿಸ್ಥಿತಿಯಲ್ಲಿ ಪುರ ಪ್ರಮುಖವನ್ನು, ಪರಿಶಿಷ್ಟ ಜಾತಿ ಮುಖಂಡರನ್ನೂ ಮತ್ತು ಬೇರೆ ವರ್ಗದ ಮುಖಂಡರನ್ನೂ ಎಲ್ಲರನ್ನೂ ಸೇರಿಸಿ, ಹಾಗೂ ತಾವೂ ಸೇರಿ ಅಲ್ಲಿ ಒಂದು ಶಾಂತಿ ಸಮಿತಿ ಮಾಡಿ ಈ ರೀತಿ ಮುಂದೆ ಆಗದಂತೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಆರ್ ಎಲ್, ಜಾಲಪ್ಪ.—ಪೋಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಸೂಚನೆ ಕೊಟ್ಟಿದ್ದೇನೆ. ಆ ಊರಿನಲ್ಲಿ ಇಬ್ಬರೂ ಇರಬೇಕಾಗಿರುತ್ತದೆ ಪರಿಶಿಷ್ಟ ಜಾತಿಯವರ ೧೫೦–೨೦೦ ಮನೆಗಳು ಇವೆ. ಅಲ್ಲಿ ೩–೪ ದಿವಸ ಬಿಟ್ಟು. ನಂತರ ಶಾಂತಿ ಸಮಿತಿ ಮಾಡಿ ಎಂದು ಸೂಚನೆ ಕೊಟ್ಟಿದ್ದೇನೆ. ಅವರೂ ಕೂಡ ಒಪ್ಪಿದ್ದಾರೆ. ಕೆಲವು ದಿವಸದಲ್ಲಿ ಅವರಿಬ್ಬರನ್ನೂ ಸೇರಿಸಿ, ಏನಾದರೂ ಒಂದು ತೀರ್ಮಾನಕ್ಕೆ ಬರುತ್ತೇವೆ. ಅವರು ಒಂದು ಸಂಶಯವನ್ನು ವ್ಯಕ್ತಪಡಿಸಿದರು. ನಾವು ಈಗ ಶಾಂತಿ ಸಮಿತಿ ಮಾಡಿ, ನಡೆದಿರತಕ್ಕ ಘಟನೆಯನ್ನು ಮುಚ್ಚುತ್ತೇವೆಂಬ ಸಂಶಯ ಅವರಲ್ಲಿ ಬಂದಿದೆ. ಅದಕ್ಕೆ ಸ್ವಲ್ಪ ದಿವಸ ಬಿಟ್ಟಿದ್ದೇವೆ.

ಶ್ರೀ ಯು ಭೂಪತಿ.—ತಾವು ಪೋಲೀಸಿನವರಿಗೆ ಆದೇಶ ಕೊಟ್ಟಿರುವ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಆದರೆ ಘಟನೆ ಬಗ್ಗೆ ನಡೆದಿರುವುದನ್ನು ಸರಿ ಮಾಡುವುದಕ್ಕೆ ಅವರನ್ನು ಕರೆಯಿಸಿ ಮಾತನಾಡಿದ್ದೀರಾ ? ಪೋಲೀಸಿನವರ ಬಗ್ಗೆ ಒಂದು ವರ್ಗದವರಿಗೆ ಭಯ ಮತ್ತೊಂದು ವರ್ಗದವರಿಗೆ ಒಂದು ರೀತಿಯ ಅನುಮಾನ ಇರುತ್ತದೆ. ಹೊಡೆದಿರುವವರಿಗೆ ಭಯ, ಹೊಡೆಸಿಕೊಂಡವರಿಗೆ ಒಂದು ರೀತಿಯಲ್ಲಿ ಅನುಮಾನ ಇರುತ್ತದೆ. ಆದುದರಿಂದ ನೇರವಾಗಿ ಪೋಲೀಸ್ ಮುಖಂಡರು ಕ್ರಮ ತೆಗೆದು ಕೊಳ್ಳುವ ಬದಲು ಸ್ಥಳೀಯ ಮುಖಂಡರು ಮತ್ತು ಆ ಕ್ಷೇತ್ರದ ನಾಯಕರನ್ನು ಕರೆಯಿಸಿ, ಮಾತುಕತೆ ಮಾಡಿ ಶಾಂತಿ ಸಮಿತಿ ಮಾಡುವುದಕ್ಕೆ ಸಾಧ್ಯವಿಲ್ಲವೇ? ಅಲ್ಲಿ ಒಂದು ತರದ ಮಾನಸಿಕ ಹಿಂಸೆಗೆ ಈ ಜನ ಒಳಗಾಗಿದ್ದರೆ, ಇದು ಬಹಳಬೇಗ ಹೋಗುವುದಿಲ್ಲ ಕೇಸ್ ಹಾಕಬಹುದು. ಆದರೆ ಈ ಭಾವನೆ ಹೋಗಬೇಕಾದರೆ ಸರಿಯಾದ ರೀತಿಯಲ್ಲಿ ಮಾತುಕತೆ ಮಾಡಿ, ನೇರವಾಗಿ ಅವರಿಬ್ಬರೂ ಕುಳಿತು ಮಾತುನಾಡುಹಾಗೆ ಮಾಡದೇ ಹೋದರೆ, ಇವತ್ತಲ್ಲ ನಾಳೆ, ಸೋಷಿಯಲ್ ಬಾಯ್‌ಕಾಟ್‌ಗೆ ಅವಕಾಶ ಆಗುತ್ತದೆ. ಈಗಾಗಲೇ ಇಂತಹ ಹಲವಾರು ಪ್ರಕರಣಗಳನ್ನು ನೋಡಿದ್ದೇವೆ. ಈ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಏನು ಎಂದು ಹೇಳುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ.—ಆ ಊರನ್ನು ಯಾರೂ ಬಿಟ್ಟು ಹೋಗುವ ಸ್ಥಿತಿಯಲ್ಲಿ ಇಲ್ಲ. ೧೦–೧೨ ಎಕರೆ ಜಮೀನು ಇಟ್ಟುಕೊಂಡಿದ್ದಾರೆ, ಅವರೆಲ್ಲರೂ ವಿದ್ಯಾವಂತರು, ತಿಳುವಳಿಕೆಯುಳ್ಳವರು. ಆಕಸ್ಮಾತ್ ಈ ಘಟನೆ ಆಗಿದೆ ಈಗ ಅವರಿಗೆ ಜ್ಞಾನೋದಯವಾಗಿದೆ, ಲೋಕಲ್ ಪೋಲೀಸ್ ಅಲ್ಲದೆ ಎಸ್ ಪಿ. ಅವರಿಗೂ ಮತ್ತು ಡಿ.ಸಿ. ಅವರಿಗೂ ಹೇಳಿದ್ದೇನೆ. ೩–೪ ದಿವಸ ಬಿಟ್ಟು ಹೋಗಿ ಶಾಂತಿ ಸಮಿತಿ ಮಾಡಿ ಎಂದು ಹೇಳಿದ್ದೇನೆ. ಈಗ ಶಾಂತಿ ಸಮಿತಿ ಮಾಡುವುದಕ್ಕೆ ಹೋದರೆ, ನಡೆದಿರತಕ್ಕ ಘಟನೆಯನ್ನು ಮುಚ್ಚುವುದಕ್ಕೆ ಈ ಕೆಲಸ ನಡೆಯುತ್ತಿದೆ ಎಂಬ ಭಾವನೆ ಬರುತ್ತದೆ. ಅಲ್ಲಿ ಏನು ದೌರ್ಜನ್ಯ ಆಗಿದೆ ಅದರ ಬಗ್ಗೆ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಒಟ್ಟಿಗೆ ನೀವಿಬ್ಬರೂ ಸೌಜನ್ಯ ದಿಂದ ಹೋಗಬೇಕೆಂದು ಹೇಳಿದ್ದೇವೆ, ಡಿ.ಸಿ. ಅವರಿಗೂ ಸೂಚನೆ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ,

ಅಧ್ಯಕ್ಷರು.—ಇದು ನಿಮಗೆ ಕೇಳುವುದಕ್ಕೆ ಬರುವುದಿಲ್ಲ. ಈ ವಿಷಯವನ್ನು ನಿಲುವಳಿ ಸೂಚನೆಗೆ ಕೊಟ್ಟಿದ್ದರು. ನನ್ನ ಚೇಂಬರಿನಲ್ಲಿ ರಿಜೆಕ್ಟ್ ಮಾಡಿ ತಿಳಿಸಿದ್ದೆನು, ಇದು ನಿಯಮಾವಳಿ ಚೌಕಟ್ಟಿನಲ್ಲಿ ಬಂದು, ವಿಷಯದ ಮಹತ್ವ ಹೇಳಿದರು. ಕಾಲಿಂಗ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡಿ ಅವಕಾಶ ಕೊಟ್ಟಿದ್ದೇನೆ. ಇದುವರೆಗೆ ಅವರು ೭ ಸಲ ಉಪಪ್ರಶ್ನೆಗಳನ್ನು ಕೇಳಿದರು. ಮಾನ್ಯ ಮಂತ್ರಿಗಳೂ

ಸಹೆ ಚೆನ್ನಾಗಿ ಉತ್ತರ ಕೊಟ್ಟರು, ಅವರಿಗೂ ಕನ್‌ವಿನ್ಸ್ ಆಯಿತಂ. ಪ್ರತಿಯೊಂದಕ್ಕೂ ಕೂಡಾ ಸೀನಿದ್ದು, ಕೆಮ್ಮಿದ್ದು ಎಂದು ನಮ್ಮ ಹಳ್ಳಿಯ ಕಡೆ ಹೇಳುತ್ತಾರೆ—ಆ ರೀತಿ ಸಣ್ಣಪುಟ್ಟ ವಿಚಾರಗಳಿಗೂ ಸಹಿತ ತಂದೂ ತಂದೂ ಅಡ್‌ಜರ್ನ್‌ಮೆಂಟ್ ಮೋಷನ್ ಕೊಡುವುದಕ್ಕೆ ಹೋಗಬೇಡಿ, ಅಡ್‌ಜರ್ನ್‌ಮೆಂಟ್ ಮೋಷನ್ ಬ್ರಹ್ಮಾಸ್ತ್ರ ಇದ್ದಹಾಗೆ, ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡುವುದು ಬೇಡ. ಈ ಬ್ರಹ್ಮಾಸ್ತ್ರವನ್ನು ಯಾವಾಗ ಪ್ರಯೋಗ ಮಾಡಬೇಕು ಆಗ ಮಾಡಬೇಕು. ಗುಬ್ಬಿ ಹೊಡೆಯುವುದಕ್ಕೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಬಾರದು ಇಂಥಾದ್ದನ್ನು ಬೇಕಾದರೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ತೆಗೆದುಕೊಂಡು ಬನ್ನಿ, ಒಂದು ಹತ್ತು ನೋಟೀಸ್ ತನ್ನಿ, ನಾನಂ ಅವಕಾಶ ಮಾಡಿಕೊಡುತ್ತೇನೆ. ಆದರೆ ಸಣ್ಣಪುಟ್ಟದ್ದಕ್ಕೆಲ್ಲಾ ಅಡ್‌ಜರ್ನ್‌ಮೆಂಟ್ ಮೋಷನ್ ತೆಗೆದು ಕೊಂಡು ಬರಬೇಡಿ. ಸಿಪಿಐ. ಇರಲಿ ಸಿಪಿಎಂ. ಇರಲಿ, ಯಾವುದೇ ಪಕ್ಷ ಇರಲಿ, ಎಲ್ಲರಿಗೂ ನಾನಂ ಹೇಳುವುದು ಇಷ್ಟೇ,

ಶ್ರೀ ಎಂ. ಎಸ್ ಕೃಷ್ಣನ್.—ಇದು ಸಣ್ಣಪುಟ್ಟ ವಿಷಯ ಎಂದಂ ಹೇಳಿದಿರಿ. ಅಲ್ಲಿ ದೊಡ್ಡ ರೀತಿಯ ಅನಾಹುತ ನಡೆದಿದೆ, ಐದುನೂರು ಜನರನ್ನು ಹೊಡೆದಿದ್ದಾರೆ. ಗುಡಿಸಲುಗಳನ್ನು ಸುಟ್ಟಿ ಹಾಕಿದ್ದಾರೆ. ಪರಿಶಿಷ್ಟ ಜಾತಿಯವರ ಮೇಲೆ ಪಲ್ಲೆ ಮಾಡಿದ್ದಾರೆ ದಬ್ಬಾಳಿಕೆ ನಡೆದಿದೆ, ಇದನ್ನು ಸಣ್ಣ ಪುಟ್ಟ ವಿಷಯ ಎಂದು ಹೇಳುತ್ತಿದ್ದೀರಲ್ಲ, ನಾವೂ ಕೂಡಾ ಯೋಚನೆ ಮಾಡುತ್ತೇವೆ. ಯಾವುದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಕೊಡಬೇಕು, ಕೊಡಬಾರದು ಎಂಬುದು ನಮಗೂ ಗೊತ್ತಿದೆ. ತಾವು ಈ ರೀತಿ ಹೇಳಿದರೆ ಚೆನ್ನಾಗಿರುವುದಿಲ್ಲ.

ಅಧ್ಯಕ್ಷರು.—ಆಯಿತು. ತಾವು ಕುಳಿತುಕೊಳ್ಳಿ, ಈಗ ನಿಯಮ ೩೩ಳಿರ ಕೆಳಗೆ ಪ್ರಸ್ತಾಪಿಸ ಲ್ಪಡುವ ವಿಷಯಗಳು,

ನಿಯಮ ೩೩ಳಿರ ಮೇರೆಗೆ

ನಾಡ ಕಚೇರಿಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸರಕಾರದವರು ೧೯೮೮–೮೯ನೇ ಸಾಲಿನಲ್ಲಿ ಸಂಮಾರು ೩೧೮ ನಾಡ ಕಚೇರಿಯನ್ನು ಹೋಬಳಿ ಮಟ್ಟದಲ್ಲಿ ಪ್ರಾರಂಭಿಸುವು ದಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದು ಸರಿಯಷ್ಟೇ. ಹಾಗಿದ್ದಲ್ಲಿ ತರೀಕೆರೆ ತಾಲ್ಲೂಕು ಜನರ ಬೇಡಿಕೆ ಮತ್ತು ಅತ್ಯವಶ್ಯಕವಾಗಿ ಆಗಬೇಕಾಗಿರುವ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹೋಬಳಿಯಲ್ಲಿ ನಾಡಕಚೇರಿಯನ್ನು ಮತ್ತು ಶಿವನಿ ಹೋಬಳಿಯಲ್ಲೂ ಕೂಡ ನಾಡ ಕಚೇರಿಯನ್ನು ಪ್ರಾರಂಭಿಸುವಿರಾ, ಯಾವಾಗ ಪ್ರಾರಂಭಿಸುವಿರಿ ? ನನ್ನ ತಾಲ್ಲೂಕಿನಲ್ಲಿ ಈ ಎರಡು ನಾಡಕಚೇರಿಯನ್ನು ಈ ವರ್ಷವೇ ಪ್ರಾರಂಭಿಸಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯ ಸರಕಾರವು ರಾಜ್ಯದ ಎಲ್ಲಾ ಹೋಬಳಿಗಳಲ್ಲೂ (ಕಸಬಾ ಹೋಬಳಿ ಹೊರತು) ಹಂತಹಂತವಾಗಿ ನಾಡಕಚೇರಿಗಳನ್ನು ಪ್ರಾರಂಭಿಸಲು ತೀರ್ಮಾನವನ್ನು ತೆಗೆದುಕೊಂಡಿದೆ. ೧೯೮೮–೮೯ರ ಸಾಲಿನಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ನೋಡಿಕೊಂಡು ಮೂರು ಹೋಬಳಿಗಳಿಗಿಂತ (ಕಸಬಾ ಹೋಬಳಿ ಹೊರತು) ಹೆಚ್ಚಿಗೆ ಹೋಬಳಿಗಳಿರುವ ಎಲ್ಲಾ ತಾಲ್ಲೂಕುಗಳಲ್ಲೂ ಎರಡು ನಾಡ ಕಚೇರಿ ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ತರೀಕೆರೆ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯೂ ಸೇರಿದಂತೆ ಒಟ್ಟು ೬ ಹೋಬಳಿಗಳಿದ್ದು, ೧೯೮೮ರಲ್ಲಿ ಅಜ್ಜಂಪುರ ಹೋಬಳಿಯಲ್ಲಿ ನಾಡಕಚೇರಿಯನ್ನು ಪ್ರಾರಂಭಿಸಲಾಗಿದೆ. ಲಕ್ಕವಳ್ಳಿ ಮತ್ತು ಶಿವನಿ ಹೋಬಳಿಗಳಲ್ಲಿ ನಾಡ ಕಚೇರಿ ಪ್ರಾರಂಭಿಸುವ ಬಗ್ಗೆ ಸೂಕ್ತ ಸಮಯದಲ್ಲಿ ಸರಕಾರದ ನೀತಿಗೆ ಅನುಸಾರವಾಗಿ ಕ್ರಮ ತೆಗೆದುಕೊಳ್ಳಲಾಗುವುದಂ.